ಕಾರಣ ಆ ಕೃತಿಗಳ 'ಹೀರೋ'ಗಳ ಬದುಕನ್ನು ಓದಬೇಕೆಂಬ ಹಟ. ವರ್ಷಕ್ಕೊಮ್ಮೆ ಗಾಂಧಿ ಜಯಂತಿ ಆಚರಿಸುವುದನ್ನು ಚಟವನ್ನಾಗಿ ಮಾಡಿಕೊಂಡಿರುವ ನಮಗೆ (ಎಲ್ಲರಿಗಿಂತ ಹೆಚ್ಚಾಗಿ ನನಗೆ) ಗಾಂಧಿ ಬಗ್ಗೆ ಗೊತ್ತಿರುವುದು, ಅವರ ಬಗ್ಗೆ 'ಎಲ್ಲ ಗೊತ್ತೆಂಬ' ನಂಬಿಕೆ ಮಾತ್ರವಾದರೆ, ಪ್ರವಾದಿ ಮುಹಮ್ಮದ್ ಅಂದರೆ ನೆನಪಾಗುವುದು ಭಯೋತ್ಪಾದನೆ ಮಾತ್ರ. ಅವರಿಬ್ಬರ ಬಗ್ಗೆ ಬಹುಪಾಲು ಮಂದಿಗೆ ಗೊತ್ತಿರದ ಸತ್ಯಗಳು ಏನಾದರೂ ಇರಬಹುದೇ ಎಂಬ ನನ್ನ 'ಸತ್ಯಶೋಧನೆ'ಯ ಪಯಣದಲ್ಲಿ ಮೊದಲು ಹೊಳೆದ ಸತ್ಯವೆಂದರೆ, ಅವರ ಬಗ್ಗೆ 'ನೋಟ್ಸ್' ಮಾಡಿಕೊಳ್ಳದೆ ಓದಿದರೆ ಅವರು ಹಿಡಿತಕ್ಕೆ ಸಿಗಲಾರರು ಎಂಬುದು. ಆ ಎರಡು ನೋಟ್ಸ್'ಗಳ 'ಕಥಾತ್ಮಕ'(ಕಲಾತ್ಮಕ ಅನ್ನಲಾರೆ) ರೂಪಗಳೇ 'ಪಾಪು ಗಾಂಧಿ, ಗಾಂಧಿ ಬಾಪು ಆದ ಕತೆ' ಮತ್ತು 'ಓದಿರಿ' ಎಂಬೆರಡು ಎರಡು ಕಾದಂಬರಿಗಳು. ಇದೀಗ ಅದೇ ಆಸೆಯಿಂದ ಅಂಬೇಡ್ಕರ್ ಅವರನ್ನು ಮುಟ್ಟಲು ಯತ್ನಿಸುತ್ತಿರುವೆ. ಅದು ಮುಗಿದರೆ, ಮುಂದೊಮ್ಮೆ ಪ್ರವಾದಿ ಮುಹಮ್ಮದರ ಪತ್ನಿ ಆಯಿಷಾರ ಬಗ್ಗೆ 'ಓದು'ವ ಮತ್ತು ಆ ಮೂಲಕ ಬರೆಯುವ ಆಸೆಯಿದೆ.

ಮುಸ್ಲಿಮ್ ಬದುಕಿನ ವಸ್ತುಗಳನ್ನೇ ಕತೆಗಳನ್ನಾಗಿ ಬರೆಯುತ್ತಿರುವ ನನಗೆ ಉಳಿದವರನ್ನು ಹೆಚ್ಚಾಗಿ ಕಾಡದ ಒಂದು ಅನಾನುಕೂಲತೆ ಇದೆ. ಕಾರಣ, ನನ್ನ ಓದುಗರಲ್ಲಿ ನೂರಕ್ಕೆ ತೊಂಬತ್ತೊಂಬತ್ತು ಮುಸ್ಲಿಮೇತರರು. 'ಅದಾಗಲೇ ಅವನು ಲಕ್ಷ್ಮಣರೇಖೆ ದಾಟಿಬಿಟ್ಟಿದ್ದ', 'ಅವಳಿಗದೊಂದು ಅಗ್ನಿಪರೀಕ್ಷೆ', 'ಎಲೆಯ ಮುಂದೆ ಕೂತರೆ ಅವನೊಬ್ಬ ಬಕಾಸುರ', 'ಅಲ್ಲಿ ನಡೆದದ್ದು ಕುರುಕ್ಷೇತ್ರ' ಇತ್ಯಾದಿ ಪದಪುಂಜಗಳ ಅರ್ಥಗಳನ್ನು ಅವರಿಗೆ ವಿವರಿಸಬೇಕಿಲ್ಲ. ಆದರೆ, 'ಮಿಂಬರ್ ಮೇಲೆ ನಿಂತಾಗ ಅವರ ಗತ್ತೇ ಬೇರೆ', 'ಮುಂದೆ ನಡೆದದ್ದು ಬದರ್ ಯುದ್ಧ', ಇತ್ಯಾದಿ ಪದಬಳಕೆ ಮಾಡಿದಾಗ 'ಮಿಂಬರ್' ಎಂದರೇನು, 'ಬದರ್' ಎಂದರೇನೆಂಬುದನ್ನು ವಿವರಿಸಲೇಬೇಕಾಗುತ್ತದೆ. ಹೀಗಾಗಿ ನನ್ನ ಬರಹಗಳು ಮತ್ತಷ್ಟು ತೆಳುವಾಗಿಬಿಡುತ್ತವೆ. ಈ ಬಗ್ಗೆ ಪಶ್ಚಾತ್ತಾಪವೇನೂ ಇಲ್ಲ.

ಬರೆಯಬೇಕಾದ ಕತೆಯೊಂದರ 'ವಸ್ತು' ಮನಸ್ಸಿನೊಳಗೆ ಗಟ್ಟಿಯಾಗದೆ ಬರೆಯಲಾರಂಭಿಸುವುದಿಲ್ಲ. ಏನನ್ನು ಹೇಳಬೇಕಾಗಿದೆ ಎಂಬ ಸ್ಪಷ್ಟ ಚಿತ್ರಣ ಮನಸ್ಸಿನೊಳಗೆ ಮೂಡಿದ ಬಳಿಕವೇ ಬರೆಯಲಾರಂಭಿಸುವೆ. ಏಳು–ಎಂಟನೇ ತರಗತಿಯ ಪಠ್ಯಗಳಲ್ಲಿರುವ ಪದಸಂಪತ್ತನ್ನು ಮೀರದಂತೆ ನಿರೂಪಿಸಬೇಕಾದ ಒತ್ತಡವನ್ನು ನನಗೆ ನಾನೇ ಹೇರಿಕೊಂಡಿರುವುದರಿಂದ, ನಿರೂಪಣಾ ತಂತ್ರದ ಬಗ್ಗೆ ಹೆಚ್ಚು ತಲೆ ಕೆಡಿಸಿಕೊಳ್ಳುವುದಿಲ್ಲ. ಆದರೆ, ಬರೆದ ಸಾಲುಗಳನ್ನು ಮತ್ತೆ ಮತ್ತೆ ಬದಲಾಯಿಸುತ್ತಲೇ ಇರುತ್ತೇನೆ (ಕಂಪ್ಯೂಟರ್ ಬಳಸಲಾರಂಭಿಸಿದ ಬಳಿಕ ಇದು ಹೆಚ್ಚಾಗಿದೆ). ಪತ್ರಿಕೆಯವರ ಅಂತಿಮ ಆದೇಶ ಬರುವವರೆಗೂ ಬರೆದುದನ್ನು ತಿದ್ದುತ್ತಲೇ ಇರುತ್ತೇನೆ. ಬದುಕಿನ ಬೇರೆಲ್ಲ ಚಟುವಟಿಕೆಗಳಲ್ಲಿ ತೀರಾ ಅವಸರದ ಪ್ರವೃತ್ತಿಯ (ಪತ್ನಿಯ ಸಂಶೋಧನೆ ಇದು) ನಾನು, ಬರವಣಿಗೆಯ ಸಂದರ್ಭಗಳಲ್ಲಿ ಮಾತ್ರ ಅತ್ಯಂತ ತಾಳ್ಮೆಯ ಜೀವಿಯಾಗಿರುತ್ತೇನೆ. ನನ್ನ ಬರಹಗಳ ಬಗ್ಗೆ ನನಗೆ ಅಂತಿಮ ತೃಪ್ತಿಯೆಂಬುದೇ ಇಲ್ಲ.

ಈ ಲೇಖನವನ್ನು ಮುಗಿಸಬೇಕು ಅನ್ನುವಷ್ಟರಲ್ಲಿ, ಅದೇ ಚಾನಲ್‌ನಲ್ಲಿ ಸಿನಿಮಾ ಒಂದನ್ನು ತೋರಿಸುತ್ತಿದ್ದರು. ಸ್ವಲ್ಪ ನೋಡಿದೆ. ಭೂಮಿಗಿಳಿದು ಬಂದ ಹಿಂದೂಗಳ ಸುಪ್ರಸಿದ್ಧ ದೇವರೊಬ್ಬರು ಬೆಂಗಳೂರಿನ ಟ್ರಾಫಿಕ್‌ನಲ್ಲಿ ಸಿಕ್ಕುಹಾಕಿಕೊಂಡು ಒದ್ದಾಡುವ ತಮಾಷೆಯ ದೃಶ್ಯವದು. 'ಲೇಖಕ ಕಲಾವಿದರ ಸೃಜನಶೀಲ ಅಭಿವ್ಯಕ್ತಿ ಸ್ವಾತಂತ್ರ್ಯವೆಂದರೆ ಇದಪ್ಪಾ...' ಎಂದು ಹಿಂದೂಯೇತರರು